KARN220037352021

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ. ಚನ್ನಪಟ್ಟಣ.</u>**

**ಉಪಸ್ಥಿತರು: ಶ್ರೀಮತಿ.ಉಷಾರಾಣಿ.,** ಬಿ.ಎ ಎಲ್‌ಎಲ್.ಬಿ., ಎಲ್.ಎಲ್.ಎಂ.,

**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**<u>ದಿನಾಂಕ: 16 ನೇ ಅಕ್ಟೋಬರ್ -2024</u>**

**<u>ಓ.ಎಸ್.ನಂ.196/2021</u>**

<u>ವಾದಿ</u> : ಶ್ರೀಮತಿ.ಚಿಕ್ಕತಾಯಮ್ಮ

-ವಿರುದ್ಧ-

<u>ಪ್ರತಿವಾದಿಗಳು</u> : ಶ್ರೀಮತಿ.ದೇವಮ್ಮ ಮತ್ತು ಇತರರು

**<u>ಮಧ್ಯಂತರ ಅರ್ಜಿ ಸಂಖ್ಯೆ:VI</u>**

<u>ಅರ್ಜಿದಾರರು/ ವಾದಿಯರು</u> : ಶ್ರೀಮತಿ.ಚಿಕ್ಕತಾಯಮ್ಮ

-ವಿರುದ್ಧ-

<u>ಎದುರುದಾರು / ಪ್ರತಿವಾದಿಯರು</u> : ಶ್ರೀಮತಿ.ದೇವಮ್ಮ ಮತ್ತು ಇತರರು

| | | |
|---|---|---|
| ಅರ್ಜಿಯ ಸ್ವರೂಪ | ಃ | 6 ನಿಯಮ 17 ಸಹವಾಚಕ ಕಲಂ 151 |
| ಯಾವ ಪರಿಹಾರ ಕೋರಲಾಗಿದೆ | ಃ | ವಾದ ಪತ್ರದ ತಿದ್ದುಪಡಿ |
| ಅರ್ಜಿ ಸಲ್ಲಿಸಿದ ದಿನಾಂಕ | ಃ | 03.04.2024 |
| ಅರ್ಜಿಯ ಸಂಖ್ಯೆ | | VI |
| ತಕರಾರು ಸಲ್ಲಿಸಿದ ದಿನಾಂಕ | : | 19.09.2024 |
| ಆದೇಶದ ದಿನಾಂಕ | : | 16.10.2024 |

Sd/-
**(ಶ್ರೀಮತಿ.ಉಷಾರಾಣಿ ಬಿ.ಎನ್.,)**
**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**<u>ಮಧ್ಯಂತರ ಅರ್ಜಿ ಸಂಖ್ಯೆ:VI ರ ಮೇಲಿನ ಆದೇಶ:</u>**

ಮಾನ್ಯ ವಾದಿಯರ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ:VI ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VI ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ ವಾದಪತ್ರವನ್ನು ಅರ್ಜಿಯಲ್ಲಿ ಕೋರಿರುವಂತೆ ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

<u>ಉದ್ದೇಶಿತ ತಿದ್ದುಪಡಿ</u>

**8 ನೇ ಪ್ರತಿವಾದಿಯ ಹೆಸರು ಸಾವಿತ್ರಮ್ಮ ಮತ್ತು ವಿಳಾಸ ನಂ.30 ದ 5 ನೇ ಮುಖ್ಯ ರಸ್ತೆ, 5 ನೇ ಕ್ರಾಸ್, ಬನಶಂಕರಿ ಬೆಂಗಳೂರು ಎಂಬುದರ ಬದಲಾಗಿ ಚೈತ್ರ ಎಸ್ ಕೋಂ ಶ್ರೀಕಾಂತ್ ವಿಳಾಸ: ಮನೆ ನಂ.60, ಶ್ರೀನಿಧಿ ನಿಲಯ, ಶಾಂತಿ ನಿಕೇತನ ಶಾಲೆಯ ಹತ್ತಿರ, ರಮಣ ಶ್ರೀ ಎನ್ಕ್ಲೇವ್, ಬಿಳೇಕಲ್ಲಹಳ್ಳಿ, ಭನ್ನೇರುಘಟ್ಟ ರಸ್ತೆ, ಬೆಂಗಳೂರು ದಕ್ಷಿಣ-76 ಎಂದು ನಮೂದಿಸಲು/ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಪ್ರಾರ್ಥನೆ.**

2. ವಾದಿಯು ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ವಾದಿಯು ಈ ದಾವೆಯನ್ನು ಪ್ರತಿವಾದಿರವರ ವಿರುದ್ದ ¼ ನೇ ವಿಭಾಗಕ್ಕಾಗಿ ಸಲ್ಲಿಸಿದ್ದು, ಸದರಿ ದಾವೆಯನ್ನು ಸಲ್ಲಿಸಿದ ನಂತರ ಈ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ 8 ನೇ ಪ್ರತಿವಾದಿಯ ಹೆಸರು ಚೈತ್ರ ಎಸ್ ಕೋಂ ಶ್ರೀಕಾಂತ್ ವಿಳಾಸ: ಮನೆ ನಂ.60, ಶ್ರೀನಿಧಿ ನಿಲಯ, ಶಾಂತಿ ನಿಕೇತನ ಶಾಲೆಯ ಹತ್ತಿರ, ರಮಣ ಶ್ರೀ ಎನ್ಕ್ಲೇವ್, ಬಿಳೇಕಲ್ಲಹಳ್ಳಿ, ಭನ್ನೇರುಘಟ್ಟ ರಸ್ತೆ, ಬೆಂಗಳೂರು ದಕ್ಷಿಣ-76 ಎಂಬುದರ ಬದಲು ಸಾವಿತ್ರಮ್ಮ ಮತ್ತು ವಿಳಾಸ ನಂ.30 ದ 5 ನೇ ಮುಖ್ಯ ರಸ್ತೆ, 5 ನೇ ಕ್ರಾಸ್, ಬನಶಂಕರಿ ಬೆಂಗಳೂರು ಎಂದು ಬೆರಳಚ್ಚು ತಪ್ಪಿನಿಂದ ತಪ್ಪಾಗಿ ನಮೂದಾಗಿರುತ್ತದೆ. ಆದುದರಿಂದ ಸದರಿ ದಾವೆಯ ವಾದ ಪತ್ರದ ಶಿರೋನಾಮೆಯಲ್ಲಿನ 8 ನೇ ಪ್ರತಿವಾದಿಯ ಹೆಸರು ಮತ್ತು ವಿಳಾಸವನ್ನು ಸದರಿ ತಿದ್ದುಪಡಿ ಅರ್ಜಿಯನ್ನು ಸಲ್ಲಿಸುವ ಮುಖಾಂತರ ಸರಿಪಡಿಸಿಕೊಳ್ಳಲು ಅವಕಾಶ ನೀಡಬೇಕೆಂದು ಈ ಅರ್ಜಿಯನ್ನು ಸಲ್ಲಿಸಿದ್ದು, ಈ ಮೇಲ್ಕಂಡ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಸದರಿ

ಸೇರ್ಪಡೆ ಅರ್ಜಿಯಲ್ಲಿರುವ ತಿದ್ದುಪಡಿಯಿಂದ ದಾವೆಯ ನೈಸರ್ಗಿಕತೆಯಲ್ಲಿ ಯಾವುದೇ ಬದಲಾವಣೆ ಉಂಟಾಗುವುದಿಲ್ಲ ಮತ್ತು ಯಾವುದೇ ವ್ಯಾಜ್ಯ ಕಾರಣ ಸಹ ಬದಲಾಗುವುದಿಲ್ಲ ಹಾಗೂ ಈ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ ಆದರೆ ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಆದಕಾರಣ ಸದರಿ ತಪ್ಪನ್ನು ತಿದ್ದುಪಡಿ ಮಾಡುವ ಅಗತ್ಯತೆಯಿರುತ್ತದೆ. **ಆದ್ದರಿಂದ ಈ ಮಧ್ಯಂತರ ಅರ್ಜಿಸಂಖ್ಯೆ:VI ನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.**

3. ಈ ಮಧ್ಯಂತರ ಅರ್ಜಿಗೆ ಪ್ರತಿವಾದಿಯು ತನ್ನ ತಕರಾರನ್ನು ಸಲ್ಲಿಸಿದ್ದು, ಅದರಲ್ಲಿ, ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯು ಕಾಲ ಪರಿಮಿತಿಯಿಂದ ಭಾಧಿತವಾಗಿದ್ದು, ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು, ಕಾಲಹರಣ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ. ಪ್ರತಿವಾದಿಯು ಮುಂದುವರೆದು ಹೇಳಿರುವುದೇನೆಂದರೇ, ವಾದಿಯು ಈಗಾಗಲೇ ವಾದ ಪತ್ರವನ್ನು ಸಲ್ಲಿಸಿದ್ದು, ಸದರಿ ದಾವೆಯು ಈಗಾಗಲೇ ಪ್ರತಿವಾದಿಗಳಿಗೆ ಸಮನ್ಸ್ ಜಾರಿ ಮಾಡಲು ಕಾಯ್ದಿರಿಸಿದ್ದು, ಈ ಸಂದರ್ಭದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿ, ಕಾಲ ವಿಳಂಬ ಮಾಡಲು ಪ್ರಯತ್ನಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಕೇಳಿರುವ ತಿದ್ದುಪಡಿ ಮಾಡಲು ಬರುವುದಿಲ್ಲ, ಕಾರಣ 8 ನೇ ಪ್ರತಿವಾದಿಯ ಹೆಸರು ಚೈತ್ರ ಎಸ್. ಕೋಂ ಶ್ರೀಕಾಂತ್ ಎನ್ನುವುವವರ ಬದಲಾಗಿ ಈ ದಾವೆಯ ಸಂಬಂಧಪಡದ ಅನ್ಯ ವ್ಯಕ್ತಿಯನ್ನು ಪಕ್ಷಗಾರರನ್ನಾಗಿ ಮಾಡಿರುವುದರಿಂದ ತಿಳಿದು ಬರುವ ವಿಷಯ ಏನೆಂದರೇ, ವಾದಿಗೆ ಈ ದಾವೆಯಲ್ಲಿ ಯಾರನ್ನು ಪಕ್ಷಗಾರರನ್ನಾಗಿ ಮಾಡಬೇಕೆಂಬ ಅರಿವು ಇಲ್ಲದಿರುವುದು ತಿಳಿದುಬರುತ್ತದೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಮತ್ತು ಸದರಿ ದಾವಾ ಸ್ವತ್ತಿನಲ್ಲಿ ಬರುವ ಭಾಗಾಂಶವನ್ನು ಲಪಟಾಯಿಸಿಕೊಳ್ಳುವ ದುರದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಈ ರೀತಿಯ ಅರ್ಜಿಯನ್ನು ಸಲ್ಲಿಸಿರುವುದು ಕಾನೂನಿನ ಪ್ರಕಾರ ಊರ್ಜಿತವಾಗತಕ್ಕದ್ದಲ್ಲವೆಂದು ಮತ್ತು ವಾದಿಯು ಸಲ್ಲಿಸಿರುವ ಈ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ ಹಾಗೂ ಈ ಅರ್ಜಿಯನ್ನು ತಿರಸ್ಕರಿಸುವುದರಿಂದ ವಾದಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. **ಆದ್ದರಿಂದ ಈ ಅರ್ಜಿಯನ್ನು ಖರ್ಚುಸಹಿತ ವಜಾಗೊಳಿಸಬೇಕೆಂದು ಕೋರಿರುತ್ತಾರೆ.**

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**ಃಅಂಶಗಳುಃ**

1. **ವಾದಿಯು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯು ಪುರಸ್ಕಾರಗೊಳ್ಳಲು ಯೋಗ್ಯವಾಗಿದೆಯೇ??**

2. **ಮಾಡುವ ಆದೇಶ ಏನು?**

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 ಃ ಸಕಾರಾತ್ಮಕವಾಗಿ**

**ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ**

**ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

**ಕಾರಣಗಳು**

7. **ಅಂಶ ಸಂಖ್ಯೆಃ1ಃ** ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿನ ಸಂಬಂಧ ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಪ್ರತಿವಾದಿಗಳಿಗೆ ಸಮನ್ಸ್ ಜಾರಿ ಮಾಡಲು ಕಾಯ್ದಿರಿಸಿದ್ದು, ಈ ಸಮಯದಲ್ಲಿ ವಾದಿಯು ಪ್ರಸ್ತುತ ಅರ್ಜಿಯನ್ನು ಸಲ್ಲಿರುತ್ತಾರೆ.

8. ವಾದಿಯ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆಃ6 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ, ಪ್ರತಿವಾದ ಪತ್ರದಲ್ಲಿ ಉದ್ದೇಶಿತ ತಿದ್ದುಪಡಿ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

9. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ವಾದಿಯರು ಉದ್ದೇಶಪೂರ್ವಕವಾಗಿ ಹಾಗೂ ಕಾಲ ವಿಳಂಬ ಮಾಡಲು ಸದರಿ ಅರ್ಜಿ ಸಲ್ಲಿಸಿದ್ದು, ಅದರಲ್ಲಿ, ವಾದಿಯರು ಸಲ್ಲಿಸಿದ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು ಹಾಗೂ ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

10. ಈ ದಾವೆಯಲ್ಲಿ ಪಕ್ಷಗಾರರ ವಿಚಾರಣೆಯು ಇನ್ನು ಪ್ರಾರಂಭವಾಗದಿರುವ ಕಾರಣ ಪ್ರಸ್ತಾಪಿತ ತಿದ್ದುಪಡಿಯಿಂದ ದಾವೆಯ ನೈಸರ್ಗಿಕತೆಗೆ ಯಾವುದೇ ಬದಲಾವಣೆ ಉಂಟಾಗುವುದಿಲ್ಲ ಹಾಗೂ ಹೊಸ ಸಂಗತಿಗಳನ್ನು ಹೊರತರುವುದಿಲ್ಲ. ಅದೇ ರೀತಿ ದಾವೆಯ ಸ್ವರೂಪವಾಗಲೀ, ಅಥವಾ ವ್ಯಾಜ್ಯ ಕಾರಣವಾಗಲೀ ಉಂಟಾಗುವುದಿಲ್ಲ ಹಾಗೂ ಪ್ರಸ್ತಾಪಿತ ತಿದ್ದುಪಡಿಯಿಂದ ಪ್ರತಿವಾದಿಗಳ ಪ್ರತಿರಕ್ಷೆಗೆ ಯಾವುದೇ ದಕ್ಕೆಯಾಗುವುದಿಲ್ಲ. ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದರೆ ವಾದಿಯರಿಗೆ ಅವರ ಹಕ್ಕಿಗೆ ನಷ್ಟವುಂಟಾಗುವ ಸಾಧ್ಯತೆಯಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿ ಸಂಖ್ಯೆ:6 ನ್ನು ಪುರಸ್ಕಾರಗೊಳ್ಳಲು ಯೋಗ್ಯವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಈ ನ್ಯಾಯಾಲಯವು **ಅಂಶ ಸಂಖ್ಯೆ:1 ನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.**

9. **<u>ಅಂಶ ಸಂಖ್ಯೆ:2:-</u>** ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## <u>ಆದೇಶ</u>

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VI ನಿಯಮ 17 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:VI ನ್ನು ಪುರಸ್ಕರಿಸಲಾಗಿದೆ.**

(ಶೀಘ್ರಲಿಪಿಗಾರರಿಗೆ ತೀರ್ಪನ್ನು ನೇರವಾಗಿ ಉಕ್ತಲೇಖನ ನೀಡಿದ್ದು, ಅವರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ನಂತರ ಅದನ್ನು ಪರಿಶೀಲಿಸಿ, ಸಹಿಯನ್ನು ಮಾಡಿ ಈ ದಿನ 16 ನೇ **ಅಕ್ಟೋಬರ್ - 2024** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**Sd/-**
**(ಉಷಾರಾಣಿ ಬಿ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಚನ್ನಪಟ್ಟಣ.**

KARN220037352021

ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ
(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)

**ಆದೇಶ**

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VI ನಿಯಮ 17 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃVI ನ್ನು ಪುರಸ್ಕರಿಸಲಾಗಿದೆ.**

**ಮಧ್ಯಂತರ ಅರ್ಜಿಸಂಖ್ಯೆಃ6 ರಲ್ಲಿ ಕೋರಿರುವಂತೆ ವಾದ ಪತ್ರವನ್ನು ತಿದ್ದುಪಡಿ ಮಾಡಲು ವಾದಿಗೆ ಅನುಮತಿ ನೀಡಲಾಗಿದೆ.**

**For amendment and amended plaint by 07.11.2024.**

***Sd/-***
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**